**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 6**
**ಚಾ.ಸಾ.ಸಂಖ್ಯೆಃ 12**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಕಿರಣ ಶಿಂಗಾಡಿ |
| ತಂದೆಯ ಹೆಸರುಃ | ಹನಮಂತ |
| ವಯಸ್ಸುಃ | 19 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ಚಾಸಾ-1, ಚಾಸಾ-10, 11, 13 ರಿಂದ 15 ಇವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ಆರೋಪಿತರು ಹಾಗೂ ಚಾಸಾ-10 ಇವರ ನಡುವೆ ಆದ ಜಗಳವನ್ನು ನಾನು ನೋಡಿಲ್ಲ, ಜಗಳ ಬಿಡಿಸಿಲ್ಲ, ಆ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು. )

**ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದಃ-**

**1.** ದಿ: **25.01.2023** ರಂದು ಆಗಿನ ಮಂತ್ರಿ ಗೋವಿಂದ ಕಾರಜೋಳ ಇವರ ಹುಟ್ಟುಹಬ್ಬದ ನಿಮಿತ್ಯ ಚಾಸಾ-**10** ರವರು ಶುಭಾಶಯದ ಬ್ಯಾನರ ಹಾಕಿಸಿದ್ದರು, ಅದನ್ನು ಆರೋಪಿತರು ತಮ್ಮ ಫೋಟೊಗಳನ್ನು ಬ್ಯಾನರನಲ್ಲಿ ಹಾಕಿಲ್ಲ ಅಂತ ಜಗಳ ತೆಗೆದು ಬ್ಯಾನರ ಕಿತ್ತು ಒಗೆದಿದ್ದರು ಎಂದರೆ ಸರಿಯಲ್ಲ. ದಿ: **30.01.2023** ರಂದು ರಾತ್ರಿ **9-30** ಗಂಟೆಗೆ ನಾನು ಹಾಗೂ ಚಾಸಾ-**10** ಮಲ್ಲಾಪೂರದ ಅವರ ಜಮೀನ ಸರ್ವೆ ನಂ. **13** ರಲ್ಲಿ ಟ್ರ್ಯಾಕ್ಟರನಿಂದ ಗಳೆ ಹೊಡೆಯಲು ಹೋಗಿದ್ದೆವು, ನಾವಿಬ್ಬರೇ ಹೋಗಿದ್ದೆವು ಅಂತ ಚಾಸಾ-**1** ಹಾಗೂ ಚಾಸಾ-**11** ಕೂಡ ಅಲ್ಲಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆಗ ರಾತ್ರಿ

**ಎಸ್.ಸಿ.ಸಂಖ್ಯೆ: 10022/2025**
**ಪ್ರಾ.ಸಾ.ಸಂಖ್ಯೆ: 6**
**ಚಾ.ಸಾ.ಸಂಖ್ಯೆ:12**

**11-00** ಗಂಟೆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಕೂಡಿಕೊಂಡು ಕೈಯಲ್ಲಿ ಕೊಯ್ತಾ, ಬಡಿಗೆ, ಕಲ್ಲು, ಕಬ್ಬಿಣದ ರಾಡಗಳನ್ನು ಹಿಡಿದುಕೊಂಡು ಬಂದು ಚಾಸಾ-**10** ಇವನಿಗೆ ಬೊಸಡಿ ಮಗನೆ ಅಂತ ಬೈದರು, ನಂತರ ಕೊಲೆ ಮಾಡುವ ಉದ್ದೇಶದಿಂದ ಆರೋಪಿ ನಂ. **1** ತನ್ನ ಕೈಯಲ್ಲಿದ್ದ ಕೊಯ್ತಾದಿಂದ, **2** ನೇ ಆರೋಪಿ ರಾಡನಿಂದ, **3** ನೇ ಆರೋಪಿ ಬಡಿಗೆಯಿಂದ, **4** ನೇ ಆರೋಪಿ ಕಲ್ಲಿನಿಂದ, ಚಾಸಾ-**10** ಇವನಿಗೆ ಹೊಡೆದು ಗಾಯ ಪಡಿಸಿದರು ಎಂದರೆ ಸರಿಯಲ್ಲ. ಅದರಿಂದಾಗಿ ಅವನ ಎಡಗೈ ಬೆರಳುಗಳು ಮುರಿದವು, ತಲೆಗೆ ರಕ್ತ ಗಾಯ ಆಗಿತ್ತು ಎಂದರೆ ಸರಿಯಲ್ಲ.

**2.** ಆಗ ನಾನು, ಚಾಸಾ-**1 , 11,** ಚಾಸಾ-**13** ಮತ್ತು **14** ರವರು ಸೇರಿ ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಮುಮಾ-**1** ರಿಂದ **6** ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ " ಹೋದ ವಾರ ದಿನಾಂಕ: **25.01.2023……….** ಕರೆದುಕೊಂಡು ಹೋದರು" ಅಂತ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. (ಸದರಿ ಹೇಳಿಕೆಯನ್ನು ನಿಪಿ-**17** ಅಂತ ಗುರುತಿಸಲಾಯಿತು).

**4.** ಜಗಳವನ್ನು ಪ್ರತ್ಯಕ್ಷ್ಯವಾಗಿ ಕಂಡು, ಜಗಳ ಬಿಡಿಸಿ, ನಿಪಿ-**17** ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.</u>**

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮುಧೋಳ.**